ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೨೪

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

## ಗುರುವಾರ, ದಿನಾಂಕ: ೨೪ನೇ ಜುಲೈ ೨೦೧೪

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

### ಮೇಲುಕೋಟೆ ಯಾತ್ರಾಸ್ಥಳಕ್ಕೆ ಕುಡಿಯುವ ನೀರು ಸರಬರಾಜು ಮತ್ತು ಶೌಚಾಲಯ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೪೬ (೧೯೩೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯ ಮೇಲುಕೋಟೆ ಯಾತ್ರಾಸ್ಥಳಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯವಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಲ್ಲಿಗೆ ಕುಡಿಯುವ ನೀರು ಒದಗಿಸಲು ಮತ್ತು ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಮೇಲುಕೋಟೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಇದುವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ?

## ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೩೪೭ (೧೯೩೩) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಯಾವುದಾದರೂ ಹೊಸ ಬಡಾವಣೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಕಳೆದ ಎಷ್ಟು ವರ್ಷಗಳಿಂದ ಬಡಾವಣೆ ನಿರ್ಮಾಣ ಕಾರ್ಯ ಮಾಡಿರುವುದಿಲ್ಲ ?

## ವಿವಿಧ ಇಲಾಖೆಗಳಲ್ಲಿ ಸರ್ಕಾರಿ ನೌಕರರು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೪೮ (೧೮೯೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಸದರಿ ನೌಕರರಿಗೆ ವೇತನ ಮತ್ತು ಇತರೆಗಳಿಗೆ ಆಗುತ್ತಿರುವ ವೆಚ್ಚವೆಷ್ಟು ; (ಇಲಾಖಾವಾರು ವಿವರ ನೀಡುವುದು)

(ಇ) ಸರ್ಕಾರದ ಇಲಾಖೆಗಳಲ್ಲಿ ಕೊರತೆ ಇರುವ ಸಿಬ್ಬಂದಿ ಎಷ್ಟು ? (ಇಲಾಖಾವಾರು ವಿವರ ನೀಡುವುದು)

## ಧಾರ್ಮಿಕ ದತ್ತಿ ಇಲಾಖೆಯ ಅಧೀನ ಶಿಕ್ಷಣ ಸಂಸ್ಥೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೪೯ (೧೯೪೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಎಷ್ಟು ಮತ್ತು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಶಿಕ್ಷಣ ಸಂಸ್ಥೆಗಳಿಗೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳೆಷ್ಟು ; ಕೊರತೆ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳೆಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಸ್ಥೆವಾರು, ಹುದ್ದೆವಾರು ವಿವರ ನೀಡುವುದು)

(ಇ) ಸದರಿ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದರೂ ಸಹ ಇವರ ಸೇವೆಯನ್ನು ಖಾಯಂಮಾತಿ ಮಾಡಲು ವಿಳಂಬಕ್ಕೆ ಕಾರಣವೇನು ; ಇವರಿಗೆ ಕನಿಷ್ಠ ವೇತನ, ಉದ್ಯೋಗ ಭದ್ರತೆ, ಮೀಸಲಾತಿ ಮತ್ತು ಇತರೇ ಸೌಲಭ್ಯಗಳನ್ನು ನೀಡುವಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ ; ಇಲ್ಲವಾದಲ್ಲಿ ಕಾರಣವೇನು ?

## ಕೈಗಾರಿಕೆಗಳ ಸ್ಥಾಪನೆ

**ಶ್ರೀಮತಿ ತಾರಾಅನುರಾಧ (ನಾಮನಿರ್ದೇಶನ ಹೊಂದಿದವರು)** –

೩೫೦ (೧೯೦೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಲಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸಣ್ಣ, ಭಾರಿ ಮತ್ತು ಮಧ್ಯಮ ಎಷ್ಟು ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪನೆಯಾಗಿವೆ ; (ಸರ್ಕಾರಿ, ಖಾಸಗಿ, ಹೆಸರು, ವಿಳಾಸ, ಉತ್ಪಾದನೆ, ಉದ್ಯೋಗಿಗಳು ಇತ್ಯಾದಿ ವಿವರಗಳನ್ನು ನೀಡುವುದು)

(ಆ) ಹಾಲಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕಳೆದ ಒಂದು ವರ್ಷದಿಂದ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಆಸಕ್ತಿ ವ್ಯಕ್ತಿಪಡಿಸಿ, ಎಷ್ಟು ದೇಶಿ/ವಿದೇಶಿ/ವ್ಯಕ್ತಿ/ಕಂಪನಿಗಳು ಸರ್ಕಾರಕ್ಕೆ ಕೋರಿಕೆ/ಪ್ರಸ್ತಾವ ಸಲ್ಲಿಸಿವೆ ; (ಪೂರ್ಣ ವಿವರಗಳನ್ನು ನೀಡುವುದು)

(ಇ) ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ ಹೆಚ್ಚಿಸಲು ದೇಶ/ವಿದೇಶಿ ಮಟ್ಟಗಳಲ್ಲಿ ಯಾವ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ ?

## ನೈಸ್ ಸಂಸ್ಥೆಯ ಕಾಂಪೌಂಡ್ ನಿರ್ಮಾಣ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ ) –**

೩೫೧ (೧೯೨೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ಬಸಾಪುರದಲ್ಲಿ BMICPA ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಬರುವ ನೈಸ್ ಸಂಸ್ಥೆಯು ನಿರ್ಮಿಸಿರುವ ರಸ್ತೆ ಹಾಗೂ ರಸ್ತೆಯ ಸುರಕ್ಷತೆಗೆ ಈಗಾಗಲೆ ರಸ್ತೆಯಿಂದ ೧೫ ಮೀಟರ್ ಜಾಗವನ್ನು ಬಿಟ್ಟು ಕಾಂಪೌಂಡ್ ನಿರ್ಮಿಸಿರುವುದು ನಿಜವೇ ;

(ಆ) ಕಾಂಪೌಂಡ್ ಹೊರಗಡೆ ೧೫ ಮೀಟರ್ ರೈತರ ಜಮೀನನ್ನು ಬಫರ್ ಝೋನ್ ಎಂದು ಕಾಯ್ದಿರಿಸಿರುವುದು ನಿಜವೇ ; ಸದರಿ ಕಾಯ್ದಿರಿಸಿರುವ ಜಮೀನಿಗೆ ಭೂ ಪರಿಹಾರ ನೀಡಲಾಗಿದೆಯೇ ; ಪರಿಹಾರ ನೀಡಿಲ್ಲವಾದಲ್ಲಿ, ಯಾವಾಗ ಪರಿಹಾರ ನೀಡಲಾಗುವುದು ;

(ಇ) ಈಗಾಗಲೇ ರಸ್ತೆಯಿಂದ ೧೫ ಮೀಟರ್ ದೂರಕ್ಕೆ ನೈಸ್ ಸಂಸ್ಥೆಯು ಕಾಂಪೌಂಡ್ ನಿರ್ಮಿಸಿದ ಮೇಲೆ ಬಫರ್ ಝೋನ್ ಎಂದು ಮತ್ತೆ ರೈತರಿಗೆ ಪರಿಹಾರ ನೀಡದೆ, ಭೂಸ್ವಾಧೀನಪಡಿಸಿಕೊಳ್ಳುವುದು ಸರಿಯೇ ; ಈ ರೀತಿಯ ಕ್ರಮಕ್ಕೆ ಪ್ರಮುಖ ಕಾರಣಗಳೇನು ;

ಈ) ಈ ಕುರಿತು ರೈತರ ಕ್ಷೇಮ ಹಾಗೂ ಇಚ್ಛೆಯಂತೆ ಮತ್ತೊಮ್ಮೆ ಸರ್ಕಾರ ಪುನರಾಲೋಚಿಸುವುದೇ ?

## ರೇಷ್ಮೆ ಬೆಳೆ ಕುಂಠಿತ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ ) (ನಾಮನಿರ್ದೇಶನ ಹೊಂದಿದವರು) –**

೩೫೨ (೧೯೫೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ರೇಷ್ಮೆ ಬೆಳೆ ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೈತರಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿರುವ ಸರ್ಕಾರ, ರೇಷ್ಮೆ ಬೆಳೆಗಾರರಿಗೆ ಅನುಕೂಲ ಮಾಡದಿರಲು ಕಾರಣವೇನು ;

(ಇ) ಬೇಡಿಕೆಗೆ ತಕ್ಕಂತೆ ರೇಷ್ಮೆ ಬೆಳೆಯದಿರಲು ಕಾರಣವೇನು ;

ಈ) ರಾಜ್ಯದ ಯಾವ ಜಿಲ್ಲೆ, ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯಲಾಗುತ್ತಿದೆ ;

ಉ) ಕಂದಾಯ ಇಲಾಖೆಯ ಹೆಚ್ಚುವರಿ ಭೂಮಿಯಲ್ಲಿ ರೇಷ್ಮೆ ಬೆಳೆಯಲು ಸರ್ಕಾರ ಚಿಂತಿಸಿದೆಯೇ ?

## ಬೆಂಗಳೂರು ಮಹಾನಗರದಲ್ಲಿ ಗಿಡಮರಗಳ ರಕ್ಷಣೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೩೫೩ (೧೮೭೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮಹಾನಗರದಲ್ಲಿ ರಸ್ತೆ ಅಗಲೀಕರಣ, ಮೆಟ್ರೋ ಕಾಮಗಾರಿ, ನಗರೀಕರಣ, ಹೀಗೆ ಅನೇಕ ಕಾರಣಗಳಿಂದ ರಸ್ತೆಯ ಬದಿಯಲ್ಲಿದ್ದ ಬೆಳೆದು ನಿಂತು ನೆರಳು ನೀಡುತ್ತಿದ್ದ ಮರಗಳನ್ನು ಕಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಮರಗಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಕಟಾವು ಮಾಡಿದ ಒಟ್ಟು ಮರಗಳೆಷ್ಟು ; (೨೦೧೦ನೇ ಸಾಲಿನಿಂದ ಇಲ್ಲಿಯವರೆಗೆ) ಹೀಗೆ ಯಾವ ಯಾವ ರಸ್ತೆಯಲ್ಲಿ ಎಷ್ಟು ಮರ, ಯಾವ

ಜಾತಿಯ ಮರಗಳನ್ನು ಕಡಿಯಲಾಗಿದೆ ; ಈ ಮರಗಳನ್ನು ಎಲ್ಲಿ ಸಂಗ್ರಹಿಸಲಾಗಿದೆ ಅಥವಾ ಮಾರಾಟ ಮಾಡಲಾಗಿದೆ ; ಮಾರಾಟದಿಂದ ಸರ್ಕಾರಕ್ಕೆ ಆದಾಯ ಬಂದಿದೆಯೇ ; (ವಿವರ ನೀಡುವುದು)

(ಇ) ನೆಲಸಮಗೊಳಿಸಲಾದ ಮರಗಳ ಬದಲಿಗೆ ಪರ್ಯಾಯವಾಗಿ ಗಿಡಗಳನ್ನು ಬೆಳೆಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ ; ಚಾಲ್ತಿಯಲ್ಲಿದ್ದಲ್ಲಿ, ಯಾವ್ಯಾವ ರಸ್ತೆಗಳ ಬದಿಯಲ್ಲಿ ಎಷ್ಟು ಗಿಡ–ಮರಗಳನ್ನು ನೆಡಲಾಗಿದೆ ; ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಇರುವ ಒಟ್ಟು ಮರಗಳ ಸಂಖ್ಯೆ ಎಷ್ಟು ; ತೆಗೆದ ಮರಗಳ ಸಂಖ್ಯೆ ಎಷ್ಟು ?

## ಅಗರ ಕೆರೆಗೆ ಕೊಳಚೆ ನೀರಿನ ಶುದ್ಧೀಕರಣ ಘಟಕ ನಿರ್ಮಾಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೩೫೪ (೧೮೭೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ; ಸದರಿ ಕೆರೆಗಳ ವಿಸ್ತೀರ್ಣ ಎಷ್ಟು ; ಕೆರೆಗಳ ನೀರಿನ ಮೂಲ ಯಾವುದು ; (ಕೆರೆವಾರು ವಿವರ ನೀಡುವುದು)

(ಆ) ಬೆಂಗಳೂರಿನಲ್ಲಿರುವ ಎಷ್ಟು ಕೆರೆಗಳಿಗೆ ಕೊಳಚೆ ನೀರಿನ ಶುದ್ಧೀಕರಣ, ಪ್ಲಾಂಟ್‌ನ್ನು ಅಳವಡಿಸಲಾಗಿದೆ ; ಇದಕ್ಕೆ ಉಪಯೋಗಿಸಿಕೊಂಡಿರುವ ಭೂಮಿ ವಿಸ್ತೀರ್ಣ ಎಷ್ಟು ; (ಕೆರೆಗಳವಾರು ವಿವರ ನೀಡುವುದು)

(ಇ) ಕೊಳಚೆ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ತಗಲಿರುವ ವೆಚ್ಚ ಎಷ್ಟು ; ಘಟಕವಾರು ವಿವರ ನೀಡುವುದು ; ಸದರಿ ಕೆರೆಗಳಿಂದ ಶುದ್ಧೀಕರಿಸಲ್ಪಟ್ಟ ನೀರಿನ ಪ್ರಮಾಣ ಎಷ್ಟು ; ಸದರಿ ನೀರನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ ;

ಈ) ಬೆಂಗಳೂರು ನಗರ ಅಗರ ಕೆರೆ ವಿಸ್ತೀರ್ಣ ಎಷ್ಟು ; ನೀರಿನ ಆಸರೆ ಯಾವುದು ; ನೀರನ್ನು ಬಳಸಿಕೊಳ್ಳಲು ತೆಗೆದುಕೊಂಡಿರುವ ಕ್ರಮಗಳೇನು ;

ಉ) ಅಗರ ಕೆರೆಗೆ ಪ್ರತಿ ದಿನ ಬಂದು ಸೇರುತ್ತಿರುವ ಕೊಳಚೆ ನೀರಿನ ಪ್ರಮಾಣ ಎಷ್ಟು ;

ಊ) ಸದರಿ ಕೆರೆಗೆ ಎಸ್.ಟಿ.ಪಿ.ಯನ್ನು ಅಳವಡಿಸಲು ಉದ್ದೇಶಿಸಲಾಗಿದೆಯೇ ; ಹಾಗಿದ್ದಲ್ಲಿ, ಇದರ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿ ವಿಸ್ತೀರ್ಣ ಹಾಗೂ ತಗುಲಬಹುದಾದ ವೆಚ್ಚ ಮತ್ತು ದಿನಂಪ್ರತಿ ನಿರ್ವಹಣೆಗೆ ತಗಲುವ ವೆಚ್ಚ ಎಷ್ಟು ; ಇದನ್ನು ಪ್ರಾರಂಭಿಸುವುದು ಯಾವಾಗ ?

## ಯುಜಿಡಿ ಯೋಜನೆ ಕ್ರಿಯಾ ಯೋಜನೆಗಳು

**ಶ್ರೀ ಅಮರನಾಥ ಪಾಟೀಲ್** (ಪದವೀಧರರ ಕ್ಷೇತ್ರ ) –

೩೫೫ (೧೯೦೪) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗುಲ್ಬರ್ಗಾ ಮಹಾನಗರದ ಒಳಚರಂಡಿ (ಯುಜಿಡಿ) ಯೋಜನೆಗೆ ಕಳೆದ ಮೂರು ವರ್ಷಗಳಿಂದ ಇತ್ತೀಚಿನವರೆಗೆ ತಯಾರಿಸಿದ ಕ್ರಿಯಾ ಯೋಜನೆಗಳ ವಿವರ ನೀಡುವುದು ; ಯಾವ ಯಾವ ಸಾಲಿನಲ್ಲಿ ಎಷ್ಟು ಕಿ.ಮೀ. ಎಷ್ಟು ಜನಸಂಖ್ಯೆ, ಎಷ್ಟು ಹಂತಗಳಲ್ಲಿ ಯೋಜನಾ ವೆಚ್ಚಗಳ ಸಮಗ್ರ ಮಾಹಿತಿ ಪ್ರತ್ಯೇಕವಾಗಿ ವಿವರ ನೀಡುವುದು ;

(ಆ) ಈ ಯೋಜನೆಗೆ ಬಿಡುಗಡೆಯಾದ ಅನುದಾನದ ಸಮಗ್ರ ವಿವರ ನೀಡುವುದು ; ಯಾವ ಮೂಲಗಳಿಂದ, ಯಾವ ವರ್ಷಗಳಲ್ಲಿ ಮತ್ತು ಎಷ್ಟು ಅನುದಾನ ಬಿಡುಗಡೆಯಾಗಿದೆ ; (ಪ್ರತ್ಯೇಕವಾಗಿ ವಿವರ ನೀಡುವುದು)

(ಇ) ಈ ಯೋಜನೆಯ ಅಡಿಯಲ್ಲಿ ಇಲ್ಲಿಯವರೆಗೆ ಕೈಗೊಂಡ ಕಾಮಗಾರಿಯ ಸಮಗ್ರ ವಿವರ ನೀಡುವುದು ; ಶೇಕಡಾವಾರು, ಕಿಲೋಮೀಟರ್‌ವಾರು ಪ್ರತ್ಯೇಕವಾಗಿ ವಿವರ ನೀಡುವುದು ; ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ? (ವಿವರ ನೀಡುವುದು)

## ಲೋಕಾಯುಕ್ತ ದಾಳಿಯಲ್ಲಿ ಸಿಲುಕಿದ ಭ್ರಷ್ಟ ಅಧಿಕಾರಿಗಳು

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು) –**

**೩೫೬** (೧೮೯೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಿಂದ ಲೋಕಾಯುಕ್ತ ದಾಳಿಗೆ ಸಿಲುಕಿದ ಅಧಿಕಾರಿಗಳ ಸಂಖ್ಯೆ ಎಷ್ಟು ; ಈ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಲೋಕಾಯುಕ್ತ ದಾಳಿಯಲ್ಲಿ ಸಿಲುಕಿದ ಭ್ರಷ್ಟ ಅಧಿಕಾರಿಗಳಿಗೆ ಮರು ಸ್ಥಳ ನಿಯುಕ್ತಿ ಮಾಡುವ ಸಮಯದಲ್ಲಿ ಆಯಕಟ್ಟಿನ ಸ್ಥಳದಲ್ಲಿ ಸ್ಥಳ ನಿಯುಕ್ತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಂತಹ ಭ್ರಷ್ಟ ಅಧಿಕಾರಿಗಳಿಗೆ ಕಾರ್ಯಕಾರಿ ಹುದ್ದೆಯ ಅಧಿಕಾರವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಸರ್ಕಾರದ ಸುತ್ತೋಲೆ ಪ್ರಕಾರ ಇಂತಹ ಅಧಿಕಾರಿಗಳಿಗೆ ನಾನ್ ಎಕ್ಸಿಕ್ಯೂಟಿವ್ ಹುದ್ದೆ ಮಾತ್ರ ನೀಡಬೇಕೆಂದು ಆದೇಶವಿದ್ದರೂ, ಈ ಸುತ್ತೋಲೆ ಪಾಲನೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಈ ಕುರಿತು ಮಾಹಿತಿ ನೀಡುವುದು)

## ಸಂಕಷ್ಟದಲ್ಲಿರುವ ಸಣ್ಣ ಪ್ರಮಾಣದ ಉದ್ದಿಮೆಗಳು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) –**

**೩೫೭** (೧೮೯೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳು ಸಂಕಷ್ಟದಲ್ಲಿ ಇದ್ದು, ಅವು ಮುಚ್ಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಿ ಲಾಭದಾಯಕವಾಗಿ ನಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಇ) ಬೆಳಗಾವಿ ನಗರದಲ್ಲಿ ಹಾಗೂ ಜಿಲ್ಲೆಯಲ್ಲಿ ಚಿಕ್ಕ ಉದ್ದಿಮೆಗಳು ಸಂಕಷ್ಟದಲ್ಲಿ ಇದ್ದ ಸಂಗತಿ ನಿಜವೇ ;

ಈ) ಈ ಜಿಲ್ಲೆಯಲ್ಲಿ ಎಷ್ಟು ಉದ್ದಿಮೆಗಳು ನೋಂದಾಯಿಸಲ್ಪಟ್ಟಿವೆ ; ಅವು ಸಂಕಷ್ಟದಲ್ಲಿ ಇರಲು ಕಾರಣಗಳೇನು ?

## ರಾಜಕಾಲುವೆ ಮತ್ತು ದೊಡ್ಡ ಮೋರಿಗಳಲ್ಲಿ ಹೂಳು ತೆಗೆಯುವುದು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೫೮ (೧೯೧೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮಹಾನಗರ ಪಾಲಿಕೆಯ ರಾಜಕಾಲುವೆ ಮತ್ತು ಇತರೆ ದೊಡ್ಡ ಮೋರಿಗಳಲ್ಲಿ ಹೂಳು ಎತ್ತುವುದು ಮತ್ತು ಮುಚ್ಚುವ ಕೆಲಸ ನಡೆಯುತ್ತಿರುವುದು ನಿಜವೇ ;

(ಆ) ಇದ್ದಲ್ಲಿ, ಕಳೆದ ಮೂರು ವರ್ಷದಿಂದ ಎಷ್ಟು ಮೋರಿಗಳ ಹೂಳು ಎತ್ತುವ ಮತ್ತು ಮುಚ್ಚುವ ಕೆಲಸ ನಡೆದಿದೆ ; ಅದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು ; ಸದರಿ ಉದ್ದೇಶಕ್ಕೆ ಮೂರು ವರ್ಷದಿಂದ ಖರ್ಚಾಗಿರುವ ವೆಚ್ಚ ಎಷ್ಟು ; (ವರ್ಷವಾರು ವಿವರ ಒದಗಿಸುವುದು)

(ಇ) ಹೆಬ್ಬಾಳ ವಿಧಾನಸಭಾ ಕ್ಷೇತ್ರ, ಬುಲ್ಲೇ ವಾರ್ಡ್ ಉದ್ಯಾನವನದ ಮಧ್ಯ ಭಾಗದಲ್ಲಿ ಹಾದು ಹೋಗುವ ಮೋರಿಯ ಉಳಿದ ಭಾಗವನ್ನು ಮುಚ್ಚಲು ೨೦೧೪–೧೫ನೇ ಸಾಲಿನಲ್ಲಿ ಉದ್ದೇಶಿಸಲಾಗಿದೆಯೇ ; ಉದ್ದೇಶಿಸಲಾಗಿದ್ದರೆ, ಎಷ್ಟು ದಿನದಲ್ಲಿ ಕೆಲಸ ಪೂರ್ಣಗೊಳಿಸಲಾಗುವುದು ?

## ಸಣ್ಣ ಕೈಗಾರಿಕೆಗಳ ಸ್ಥಾಪನೆ

**ಶ್ರೀ ಆರ್. ಧರ್ಮಸೇನಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೫೯ (೧೯೧೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ ;

(ಆ) ಕಳೆದ ೦೩ ವರ್ಷಗಳಿಂದ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಘಟಕವನ್ನು ಸ್ಥಾಪಿಸುವ ಸಲುವಾಗಿ ಉತ್ತೇಜಿಸಲು ಸರ್ಕಾರವು ಎಷ್ಟು ಹಣವನ್ನು ಯಾವ ಯಾವ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ ; ಹಾಗೂ ಜಿಲ್ಲೆಯ ಯಾವ ಸ್ಥಳಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ ;

(ಇ) ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಘಟಕವನ್ನು ಸ್ಥಾಪಿಸುವ ಸಲುವಾಗಿ ಯಾವ ಯಾವ ಸ್ಥಳಗಳಲ್ಲಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ; ಈ ರೀತಿ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಎಷ್ಟೆಷ್ಟು ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಲಾಗಿದೆ ;

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಯಾವ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ ?

## ಪೊಲೀಸ್ ವಸತಿ ಗೃಹಗಳು

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೬೦ (೧೯೪೮) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಸಿಬ್ಬಂದಿಗಳಿಗೆ ಎರಡೂ ಜಿಲ್ಲೆಗಳಲ್ಲಿ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಿ ಕೊಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಗುಲ್ಬರ್ಗಾದಲ್ಲಿ ಈಗಿರುವ ವಸತಿ ಗೃಹಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು ;

ಈ) ಪ್ರಸಕ್ತ ಸಾಲಿನಲ್ಲಿ ಎರಡೂ ಜಿಲ್ಲೆಗಳಲ್ಲಿ ಎಷ್ಟು ಪೊಲೀಸ್ ವಸತಿ ಗೃಹ ನಿರ್ಮಿಸಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು